ಭೂ ನ್ಯಾಯಮಂಡಳಿಗಳ ಮುಂದಿರುವ ಬಾಕಿ ಪ್ರಕರಣಗಳು

4921 - ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಭೂ ನ್ಯಾಯ ಮಂಡಳಿಗಳ ಮುಂದೆ ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)*

ಆ) *ಭೂ ನ್ಯಾಯ ಮಂಡಳಿಯನ್ನು ಶೀಘ್ರವಾಗಿ ರಚಿಸಲು ಕೈಗೊಂಡಿರುವ ಕ್ರಮಗಳೇನು?*

ಇ) *ಸಮಿತಿಯ ಸದಸ್ಯರ ವಿದ್ಯಾರ್ಹತೆ ಬಗ್ಗೆ ಇತ್ತೀಚಿಗೆ ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರಕ್ಕೆ ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 13724 (ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ : 23.03.1999 ರಂದು ನೀಡಿದ ತೀರ್ಪಿನ ಆಧಾರದ ಮೇಲೆ ಸರ್ಕಾರ ದಿನಾಂಕ 5.8.2000ರಂದು ಸುತ್ತೋಲೆಯೊಂದನ್ನು ಹೊರಡಿಸಿ ಭೂ ನ್ಯಾಯ ಮಂಡಳಿಗೆ ನಾಮ ನಿರ್ದೇಶನಗೊಳ್ಳುವರು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಸೇರಿದ್ದರೆ 8ನೇ ತರಗತಿಗಿಂತ ಕಡಿಮೆಯಿಲ್ಲದ ವಿದ್ಯಾರ್ಹತೆ ಹೊಂದಿರಬೇಕೆಂದೂ ಹಾಗೂ ಇತರರು 12ನೇ ತರಗತಿಗಿಂತ ಕಡಿಮೆ ಇಲ್ಲದ ವಿದ್ಯಾರ್ಹತೆ ಹೊಂದಿರಬೇಕೆಂದು ಮಾರ್ಗಸೂಚಿ ಹೊರಡಿಸಿದೆ. ಅದರಂತೆ ಶಾಸಕರೂ ಸೇರಿದಂತೆ ವಿವಿದ ಮಹನೀಯರುಗಳಿಂದ ಬಂದ ಬೇಡಿಕೆಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ವಿದ್ಯಾರ್ಹತೆಯ ಬಗ್ಗೆ ಧೃಡಪಡಿಸಿಕೊಂಡು ಭೂನ್ಯಾಯ ಮಂಡಳಿಗಳನ್ನು ಆದ್ಯತೆಯ ಮೇರೆಗೆ ಪುನರ್ ರಚಿಸಿ ನಾಮ ನಿರ್ದೇಶನ ಮಾಡಲಾಗುತ್ತಿದೆ.

ಇ) -ಅದೇ-

ಈ) -ಅದೇ-

ಕರ್ನಾಟಕ ಭೂ ಸುಧಾರಣೆ ಕಾಯ್ದೆಯಡಿ ರಾಜ್ಯದ ಭೂ ನ್ಯಾಯ ಮಂಡಳಿಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿವರ

ವಿಭಾಗ : ಜಿಲ್ಲಾವಾರು ವರದಿ

ಬೆಂಗಳೂರು ವಿಭಾಗ		ಮೈಸೂರು ವಿಭಾಗ		ಬೆಳಗಾವಿ ವಿಭಾಗ		ಗುಲ್ಬರ್ಗಾ ವಿಭಾಗ	
ಬೆಂಗಳೂರು ನಗರ	110	ಮೈಸೂರು	273	ಬೆಳಗಾಂ	915	ಗುಲ್ಬರ್ಗಾ	179
ಬೆಂಗಳೂರು (ಗ್ರಾ)	182	ಚಾಮರಾಜನಗರ	71	ಬಿಜಾಪುರ	97	ಬೀದರ್	30

ಬೆಂಗಳೂರು ವಿಭಾಗ		ಮೈಸೂರು ವಿಭಾಗ		ಬೆಳಗಾವಿ ವಿಭಾಗ		ಗುಲ್ಬರ್ಗಾ ವಿಭಾಗ	
ತುಮಕೂರು	146	ಮಂಡ್ಯ	140	ಕಾರವಾರ	554	ಬಳ್ಳಾರಿ	996
ಕೋಲಾರ	474	ಹಾಸನ	27	ಬಾಗಲಕೋಟೆ	51	ರಾಯಚೂರು	189
ಚಿತ್ರದುರ್ಗ	19	ಚಿಕ್ಕಮಗಳೂರು	40	ಧಾರವಾಡ	177	ಕೊಪ್ಪಳ	139
ದಾವಣಗೆರೆ	33	ದಕ್ಷಿಣ ಕನ್ನಡ	638	ಗದಗ	49		
ಶಿವಮೊಗ್ಗ	1080	ಉಡುಪಿ	1162	ಹಾವೇರಿ	423		
		ಕೊಡಗು	5510				
	2044		7861		2266		1553

ರಾಜ್ಯದಲ್ಲಿ ಅಕ್ರಮ ಸಕ್ರಮ ಸಮಿತಿಗಳ ಕಾರ್ಯನಿರ್ವಹಣೆ

4923 - ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅಕ್ರಮ ಸಕ್ರಮ ಸಮಿತಿಗಳು ಎಷ್ಟು? ಅವುಗಳಲ್ಲಿ ಎಷ್ಟು ಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆ? ಎಷ್ಟು ಕಾರ್ಯ ನಿರ್ವಹಿಸುತ್ತಿಲ್ಲ ಹಾಗೂ ಕಾರ್ಯನಿರ್ವಹಿಸದೇ ಇದ್ದಲ್ಲಿ ಕಾರಣಗಳೇನು?

ಆ) ಈ ಸಮಿತಿಗಳ ಮುಂದೆ ಸಕ್ರಮೀಕರಣಗೊಳ್ಳಲು ಬಾಕಿ ಇರುವ ಅರ್ಜಿಗಳೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಸದರಿ ಬಾಕಿ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಒಟ್ಟು ಬಗರ್ ಹುಕುಂ ಸಾಗುವಳಿ ಸಮಿತಿಗಳ ಸಂಖ್ಯೆ : 175

ಕಾರ್ಯನಿರ್ವಹಿಸುತ್ತಿರುವ ಸಮಿತಿಗಳು 94

ಉಳಿದ 81 ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗುತ್ತಿದೆ.

ಆ) ಬಾಕಿ ಇರುವ ಅರ್ಜಿಗಳ ಸಂಖ್ಯೆ : 10,82,099

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸಕ್ರಮೀಕರಣಕ್ಕೆ ಸ್ವೀಕರಿಸಲಾಗಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಶೀಘ್ರ ವಿಲೇವಾರಿ ಮಾಡಲು ಸೂಚನೆಗಳನ್ನು ನೀಡಲಾಗಿದೆ.